ಅಧ್ಯಕ್ಷರು: ಈಗ ವರದಿ ಒಪ್ಪಿಸುವುದು

ಶ್ರೀ ನೆ ಲ ನರೇಂದ್ರ ಬಾಬು: ನಮ್ಮ ಮೇಲೆ ಏನು ಕರುಣೆಯಿಲ್ಲವಲ್ಲ.

2) ವರದಿ ಒಪ್ಪಿಸುವುದು

ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) ಅಧ್ಯಕ್ಷರು ಸಾರ್ವಜನಿಕ ಉದ್ಯಮಗಳ ಸಮಿತಿ) ಮಾನ್ಯ ಅಧ್ಯಕ್ಷರೆ, ಕರ್ನಾಟಕ ವಿಧಾನ ಮಂಡಲದ ಸಾರ್ವಜನಿಕ ಉದ್ಯಮಗಳ ಸಮಿತಿಯ ಅಧ್ಯಕ್ಷನಾದ ನಾನು ಸಮಿತಿಯ 115 ನೇ ವರದಿಯನ್ನು ಸಮಿತಿಯ ಪರವಾಗಿ ದಿನಾಂಕ 12–07–2007 ರಂದು ಸದನದಲ್ಲಿ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು: ಮಂಡಿಸಲಾಯಿತು.

ವಿಷಯ: ಕರ್ನಾಟಕ ವಿಧಾನ ಮಂಡಲದ ಸಾರ್ವಜನಿಕ ಉದ್ಯಮಗಳ ಸಮಿತಿಯ 115ನೇ ವರದಿ.

ಅಧ್ಯಕ್ಷರು: ಈಗ ಶೂನ್ಯವೇಳೆಯಲ್ಲಿ ವಿರೋಧ ಪಕ್ಷದ ನಾಯಕರು ಮಾತನಾಡುತ್ತಾರೆ. ಸ್ವಲ್ಪ ಎಲ್ಲರೂ ಕುಳಿತುಕೊಳ್ಳಿ.

ಶ್ರೀ ನೆ ಲ ನರೇಂದ್ರ ಬಾಬು: ಸ್ವಾಮಿ ಎರಡು ಪ್ರಶ್ನೆಯಿದೆ. ಕೇಳಿ ಬಿಡುತ್ತೇವೆ. ಅವಕಾಶ ಮಾಡಿಕೊಡಿ. ಮಾನ್ಯ ವಿರೋಧ ಪಕ್ಷದ ನಾಯಕರು ನಮಗೆ ಸಹಾಯಕ್ಕೆ ಬರಬೇಕು. ನಮಗೆ ಅವಕಾಶ ಮಾಡಿಕೊಡಿ.

ಶ್ರೀ ಜಿ ಎಸ್ ಗಡ್ಡದೇವರ ಮಠ: ಐದು ನಿಮಿಷ ಲೇಟಾಗಿ ಬಂದೆವು ನಮಗೆ ದಯವಿಟ್ಟು ಅವಕಾಶ ಕೊಡಿ.

(ಗೊಂದಲ)

ಅಧ್ಯಕ್ಷರು: ದಯಮಾಡಿ ಕುಳಿತುಕೊಳ್ಳಬೇಕು.

(ಗೊಂದಲ)